**2**

# ಕರ್ನಾಟಕ ಸರ್ಕಾರ

ಸಂಖ್ಯೆ : ಸಿಓ 220 ಸಿಎಲ್‌ಎಂ 2005

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿಗಳ ಕಟ್ಟಡ
ಬೆಂಗಳೂರು ದಿನಾಂಕ 22.8.2005

## ಅಧಿಸೂಚನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 (2000ದ ಅಧಿನಿಯಮ ಸಂಖ್ಯೆ 17) ಪ್ರಕರಣ 3ರ ಉಪ ಪ್ರಕರಣ (3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹಾಗೂ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ, 34 ಸಿಎಲ್‌ಎಂ. 2001 ದಿನಾಂಕ 28.2.2003 ಅನ್ನು ಭಾಗಶಃ ಮಾರ್ಪಡಿಸಿ ಮತ್ತು ಅಧಿಸೂಚನೆ ಸಂಖ್ಯೆ: ಸಿಓ 191 ಸಿಎಲ್‌ಎಂ 2004(ಭಾಗ–2) ದಿನಾಂಕ 2.2.2005ನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯ ಅಂಕಣ (2) ರಲ್ಲಿ ಸೂಚಿಸಿರುವ ಅಧಿಕಾರಿಗಳಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ಉಪಬಂಧಗಳಿಗನುಸಾರ, ಹಂಚಿಕೆ ಮಾಡಿದ ಜಿಲ್ಲೆಗಳ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ಅಂಕಣ (4) ರಲ್ಲಿ ನಿರ್ದಿಷ್ಟ ಪಡಿಸಿದ ಸಹಕಾರಿಗಳ ರಿಜಿಸ್ಟ್ರಾರನ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆ.

## ಅನುಸೂಚಿ

| ಕ್ರಮ ಸಂಖ್ಯೆ | ಅಧಿಕಾರಿಗಳ ಪ್ರವರ್ಗ | ಹಂಚಿಕೆ ಮಾಡಿದ ಜಿಲ್ಲೆಗಳು | ಅಧಿಕಾರಿಗಳ ಪ್ರತ್ಯಾಯೋಜನೆ |
|---|---|---|---|
| (1) | (2) | (3) | (4) |
| 1 | ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441ರ ಪ್ರಕಾರ ನೇಮಕ ಹೊಂದಿದ ಸಹಕಾರಿಗಳ ಜಂಟಿ ರಿಜಿಸ್ಟ್ರಾರ್ | | ಪ್ರಕರಣ: 39, 40, 41 (41ರ ಉಪಪ್ರಕರಣ) (1) (ಬಿ) (ಸಿ) ಹೊರತು ಪಡಿಸಿ) 44 ಮತ್ತು 45 |

| (1) | (2) | (3) | (4) |
|---|---|---|---|
| | ಕೇಂದ್ರ ಸ್ಥಾನ ಬೆಂಗಳೂರು | ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು ಎಲ್ಲಾ ಜಿಲ್ಲೆಗಳು | ನಿಯಮ : 11 ಮತ್ತು 29 |
| | ಕೇಂದ್ರ ಸ್ಥಾನ ಹುಬ್ಬಳ್ಳಿ | ಬೆಳಗಾಂ ಮತ್ತು ಗುಲ್ಬರ್ಗಾ ಪ್ರಾಂತಗಳ ಎಲ್ಲಾ ಜಿಲ್ಲೆಗಳು | |
| | ಕರ್ನಾಟಕ ರಾಜ್ಯ ಸಹಕಾರಿ ಪಟ್ಟಣ ಬ್ಯಾಂಕುಗಳ ಮಹಾ ಮಂಡಳ ನಿಯಮಿತ, ಬೆಂಗಳೂರು ಇದಕ್ಕೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 441ರ ಪ್ರಕಾರ ನೇಮಕ ಹೊಂದಿದ ಸಹಕಾರಿಗಳ ಸಹಾಯಕ ರಿಜಿಸ್ಟ್ರಾರ್ ಮ್ತು ವಸೂಲಿ ಅಧಿಕಾರಿ | | |
| | ಕೇಂದ್ರ ಸ್ಥಾನ : ಬೆಂಗಳೂರು | ಬೆಂಗಳೂರು ಮತ್ತು ಮೈಸೂರು ಪ್ರಾಂತಗಳು ಎಲ್ಲಾ ಜಿಲ್ಲೆಗಳು | ಪ್ರಕರಣ 43 |
| | ಕೇಂದ್ರ ಸ್ಥಾನ : ಹುಬ್ಬಳ್ಳಿ | ಬೆಳಗಾಂ ಮತ್ತು ಗುಲ್ಬರ್ಗಾ ಪ್ರಾಂತಗಳ ಎಲ್ಲಾ ಜಿಲ್ಲೆಗಳು | ನಿಯಮ : 16, 18 ಮತ್ತು 29 |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

**(ಆರ್. ಎಸ್. ಹುಚ್ಚಾಚಾರಿ)**

ವಿಶೇಷ ಕರ್ತವ್ಯಾಧಿಕಾರಿ, ಸಹಕಾರಿ ಇಲಾಖೆ